ಪರಿಹಾರಗಳನ್ನು ಹುಡುಕಿ ಹೊರಡೋಣ ಎಂದು ಭಾವೇಶ್ ಮತ್ತಷ್ಟು ಪ್ರಯತ್ನಶೀಲರಾದರು.

ಅವರಿಗೆ ಆ ದಿನಗಳಲ್ಲಿ ಅವರ ಬಾಲ್ಯದ ಹಿಂದಿ ಪಠ್ಯಪುಸ್ತಕದ ಒಂದು ಕವಿತೆಯ ಪಂಕ್ತಿಗಳು ಮತ್ತೆ ಮತ್ತೆ ನೆನಪಾದವು:

**ಮೈ ಗೋತಾಖೋರ್ ಗಹರೆ ಜಾನಾ ಹೋಗಾ**
**ತುಮ್ ತಟ್ ಪರ್ ಬೈಠೆ ಲಹರೋ ಕೀ ಬಾತೆ ಕಿಯಾ ಕರೋ**

ತಾವು ಲೈಫ್ ಗಾರ್ಡ್ ಆಗಿರುವಾಗ ಆಳದ ನೀರಿಗೆ ಧುಮುಕಲೇಬೇಕು. ಬರೀ ದಡದಲ್ಲಿ ಕುಳಿತು ಅಲೆಗಳ ಬಗ್ಗೆ ಮಾತನಾಡುತ್ತಾ ಕೂರುವಂತಿಲ್ಲ. ಇಷ್ಟೆಲ್ಲ ಅಂಧ ಮಿತ್ರರನ್ನು ಒಟ್ಟುಗೂಡಿಸಿದ ಮೇಲೆ ಈಗ ಗೆಯರ್ ಬದಲಿಸಲೇ ಬೇಕು. ಆಳದ ನೀರಿಗೆ ಧುಮುಕುವ ಸಂದರ್ಭ ಬಂದಿದೆ ಎಂದು ಭಾವೇಶ್ ಅವರಿಗೆ ಅರಿವಾಯಿತು.

ಹಾಗೆ ನೋಡಿದರೆ, ತಿಲಕ್ ಸ್ಮಾರಕ ಪ್ರದರ್ಶನದ ಮೂಲಕ ಅವರು ಸಮುದ್ರದ ಆಳಕ್ಕೆ ನೆಗೆದಿದ್ದರು. ಆ ಮೂಲಕ ಸನ್‌ರೈಸ್ ಕ್ಯಾಂಡಲ್ಸ್ ಒಂದು ಗಿಡವಾದದ್ದು ಮರವಾಗುವತ್ತ ಸಣ್ಣ ಹೆಜ್ಜೆ ಇಟ್ಟಿತ್ತು. ಈಗ ಭಾವೇಶ್ ಅನೇಕ ದೊಡ್ಡ ಹೋಟೆಲ್ ಮತ್ತು ರೆಸಾರ್ಟ್‌ಗಳನ್ನು ಸಂಪರ್ಕಿಸಿದರು. ಅಲ್ಲಿ ಅಂಗಡಿಗಳನ್ನು ಬಾಡಿಗೆಗೆ ತೆಗೆದುಕೊಂಡು ಸ್ಟಾಲ್ ಹಾಕಿದರು. ಈ ಮೂಲಕ ಹೆಚ್ಚು ಮೋಂಬತ್ತಿಗಳು ಮಾರಾಟವಾದರೆ, ಅವರ ಅಂಧ ಮಿತ್ರರಿಗೆ ಹೆಚ್ಚು ಹೆಚ್ಚು ಕೆಲಸ ಸಿಗಲು ಸಾಧ್ಯವಾಗುವುದು.

ಅವರಿಗೆ ಸರ್ಕಾರದ್ದೋ, ಸರ್ಕಾರೇತರದ್ದೋ ಆದ ಯಾವುದೇ ಸಂಸ್ಥೆಯ ಬೆಂಬಲವಿರಲಿಲ್ಲ. ಸರ್ಕಾರದ ಅನುದಾನವೇನೂ ಬರುತ್ತಿರಲಿಲ್ಲ. ಹಾಗೆಂದೇ 'ಸನ್‌ರೈಸ್ ಕ್ಯಾಂಡಲ್ಸ್' ಸಂಪೂರ್ಣ ಭಾವೇಶ್ ಮತ್ತು ಅವರ ಅಂಧ ತಂಡದ ಪರಿಶ್ರಮದ ಮೇಲೆ ನಿಂತಿತ್ತು. ಸಿಂದೋಡಾದ ವರ್ಕ್‌ಶಾಪ್‌ನಲ್ಲಿ ದೃಷ್ಟಿಹೀನ ಮಿತ್ರರು ತಮ್ಮ ಶ್ರಮದಿಂದ ತಮ್ಮ ಪಾಲಿನದನ್ನು ಗಳಿಸುತ್ತಿದ್ದರು. ಯಾರದು ಎಷ್ಟು ಶ್ರಮ ಇದೆಯೋ, ಅದರಂತೆ ಪ್ರತಿಫಲ ಸಿಗುತ್ತಿತ್ತು. ಮೆಲ್ಲನೆ ಸನ್‌ರೈಸ್ ಕ್ಯಾಂಡಲ್ಸ್‌ನ ಪ್ರಸಿದ್ಧಿ ದೂರದ ಊರುಗಳಿಗೂ ಹರಡತೊಡಗಿತು. ಸೋಷಿಯಲ್ ಮೀಡಿಯಾಗಳಲ್ಲಿ, ಪತ್ರಿಕೆಗಳಲ್ಲಿ, ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ, ದಿನವೂ ಯಾರಾದರೊಬ್ಬರು ಸನ್‌ರೈಸ್ ಕ್ಯಾಂಡಲ್ಸ್ ಬಗ್ಗೆ ಉಲ್ಲೇಖಿಸುತ್ತಿದ್ದರು. ಅದರಿಂದಾಗಿ, ಮಹಾರಾಷ್ಟ್ರದ ಆಸುಪಾಸಿನ ಇತರ ರಾಜ್ಯಗಳು, ಕರ್ನಾಟಕ, ಗೋವಾ, ಗುಜರಾತ್, ಮಧ್ಯಪ್ರದೇಶಗಳಿಂದಲೂ ಜನ ಇವರ ಮೋಂಬತ್ತಿಗಳ ಬಗ್ಗೆ ವಿಚಾರಿಸುತ್ತಿದ್ದರು. ಆ ಪ್ರದೇಶಗಳಲ್ಲಿ ಕೆಲಸವಿಲ್ಲದೆ ಇದ್ದ ಅಂಧರು ಸನ್‌ರೈಸ್ ಕ್ಯಾಂಡಲ್ಸ್ ಜೊತೆಗೆ ಸೇರಬಯಸಿದ್ದರು. ಅವರೂ ಮೋಂಬತ್ತಿ ತಯಾರಿಸುವುದನ್ನು ಕಲಿಯಬಯಸಿದ್ದರು. ಭಾವೇಶ್ ಅವರೆಲ್ಲರಿಗೂ ಕಲಿಸಲು ಉತ್ಸುಕರಾಗಿದ್ದರು. ಇದೇ ಅವರು ಮತ್ತು ನೀತಾ ಕಂಡ ಕನಸಾಗಿತ್ತು. ಈಗ ಹಿಗ್ಗುತ್ತಿರುವ ಈ ಕಲಿಕೆ ಮತ್ತು ತಯಾರಿಕೆಯ ಕಾರ್ಯವನ್ನು ನಿಭಾಯಿಸುವಂತಹ ಯೋಜನೆ ಬೇಕಿತ್ತು.

ತಿಲಕ್ ಸ್ಮಾರಕ ಪ್ರದರ್ಶನದ ತಯಾರಿಯ ಸಮಯದಲ್ಲಿ ಒಂದು ದಿನ ಚರ್ಚ್‌ನ ಸ್ಟಾಲ್‌ನಲ್ಲಿ ಭಾವೇಶ್ ಮತ್ತು ನೀತಾ ನಿಂತಿದ್ದರು. ಕಳೆದ ಅನೇಕ ವರ್ಷಗಳಿಂದ, ಅಶೋಕ್ ಭಾಯಿ ಭೀಮಾನೀ ಅವರ ಪರಿವಾರ ಆರ್.ಕೆ.ವಾಡಿಗೆ ಆಗಾಗ್ಗೆ ಬರುತ್ತಿತ್ತು. ಅವರ ಮಗ ಯೋಗೀನ್ ಆ ದಿನ, ಓರ್ವ ಸಜ್ಜನರನ್ನು ಮತ್ತು ಅವರ ಪತ್ನಿಯನ್ನು ಭಾವೇಶ್ ಅವರ ಸ್ಟಾಲ್‌ಗೆ ಕರೆತಂದಿದ್ದರು. ಆ ಸಜ್ಜನರ ಸರಳ ಮತ್ತು ಹೃದಯಸ್ಪರ್ಶಿ ಮಾತುಗಳು ಭಾವೇಶರನ್ನು ಬಹಳಷ್ಟು ಪ್ರಭಾವಿಸಿದ್ದವು. ಆ ಸಜ್ಜನರ ಹೆಸರು ಫೂಲ್ಚಂದ್ ಬಾಗ್ಮಾರ್.

ಆ ಸಜ್ಜನರ ದೊಡ್ಡ ಅಳಿಯ ಮತ್ತು ಅಶೋಕ್ ಭಾಯಿ ಮುಂಬಯಿ ಕಂಪನಿಯೊಂದರಲ್ಲಿ ಜೊತೆಗಾರರಾಗಿದ್ದರು. ಇಲ್ಲಿಂದ ಸುಮಾರು 7 ಕಿ.ಮೀ. ದೂರದಲ್ಲಿ ಅವರ ಮನೆಯ ಕಟ್ಟಡದ ಕೆಲಸ ನಡೆಯುತ್ತಿತ್ತು. ಅವರುಗಳ ಮಾತುಗಳಲ್ಲಿ ಒಂದು ಕಡೆ ಸ್ವಾಮಿ ಸತ್ಯ ನಿರಂಜನರ ಹೆಸರು ಕೇಳಿಬರುತ್ತಿತ್ತು. ಇನ್ನೊಂದೆಡೆ ಯೋಗೀನ್ ಅವರನ್ನು 'ಭಾವಸಾ' ಎಂದು ಕರೆದು ಸಂಬೋಧಿಸುತ್ತಿದ್ದರು. ಕಣ್ಣಿನಲ್ಲಿ ಕಾಣಲಾರದ ಭಾವೇಶ್ ಅವರಿಗೆ ಈ ಎರಡೂ ಹೆಸರು ಯಾರದು ಎಂಬ ಗೊಂದಲ. ಆ ಸಜ್ಜನರು ಭಾವೇಶ್ ಅವರ ಗಲಿಬಿಲಿಯನ್ನು ತಕ್ಷಣ ಗ್ರಹಿಸಿದ್ದರು. 'ನನಗೆ ಓಷೋ ಅವರು ನೀಡಿದ ಹೆಸರು 'ಸ್ವಾಮಿ ಸತ್ಯ ನಿರಂಜನ' ಎಂಬುದು. ನನ್ನ ಪೂರಾ ಪರಿವಾರ ನನ್ನನ್ನು ಭಾವಸಾ ಎಂದೇ ಕರೆಯುತ್ತಾರೆ. ನೀವು ನನ್ನನ್ನು ಭಾವಸಾ ಎಂದೇ ಕರೆಯಬಹುದು' ಎಂದರು.

ಇದರ ಮರುದಿನ ಭಾವೇಶ್ ಅವರು ತಿಲಕ್ ಸ್ಮಾರಕದ ತಯಾರಿಯಲ್ಲಿ ತೊಡಗಿ ಮನೆಯಲ್ಲಿ ಇದ್ದಾಗ, 'ನಾನು ಒಳಗೆ ಬರಬಹುದೆ?' ಎಂದು ಒಂದು ದನಿ ಕೇಳಿತ್ತು. ತಕ್ಷಣವೇ ಭಾವೇಶ್ ಆ ಧ್ವನಿಯನ್ನು ಗುರುತಿಸಿ ಹೇಳಿದ್ದರು 'ಅರೆ ಭಾವಸಾ ನೀವು. ಬನ್ನಿ ಬನ್ನಿ'. ಭಾವಸಾ ತಮ್ಮ ಇಡೀ ಕುಟುಂಬದ ಜೊತೆಯಲ್ಲಿ ಭಾವೇಶ್ ಅವರನ್ನು ಭೇಟಿಯಾಗಲು ಬಂದಿದ್ದರು. ಭಾವಸಾ ಅವರ ಪತ್ನಿ ಕುಸುಮ ಅವರು ಹೊರಡುತ್ತಾ ನೀತಾಗೆ ಹೇಳಿದರು: 'ನನಗೆ ಇಬ್ಬರು ಹೆಣ್ಣುಮಕ್ಕಳಿದ್ದಾರೆ. ದೊಡ್ಡ ಮಗಳು ಸುಜಾತ ಡಾಕ್ಟರ್ ಆಗಿದ್ದಾಳೆ. ಚಿಕ್ಕ ಮಗಳು ಸುಷ್ಮಾ ಸಿ.ಎ. ಮಾಡಿದ್ದಾಳೆ. ಆದರೆ ಇವತ್ತಿನಿಂದ ನೀನು ನನ್ನ ಮೂರನೇ ಮಗಳು'. ಭಾವಸಾ ಅವರಿಗೆ ಮೂವರು ಗಂಡುಮಕ್ಕಳೂ ಇದ್ದಾರೆ. ಅಭಯ್, ಸಿ.ಎ ಮಾಡಿದ್ದರು. ತುಷಾರ್ ಆಟೋಮೊಬೈಲ್ ಕೆಲಸದಲ್ಲಿ ತೊಡಗಿದ್ದರು. ರಾಹುಲ್ ಬಿಲ್ಡರ್ ಆಗಿದ್ದರು. ಇವರಲ್ಲದೆ, ಭಾವಸಾ ಅವರ ಪರಿವಾರದಲ್ಲಿ ಅಭಯ್ ಭಾಯಿ ಅವರ ಪತ್ನಿ ಜಾಸ್ಮಿನ್ ಬಾಭೀಜೀ ಮತ್ತು ಮೊಮ್ಮಗ ಆತ್ಮನ್ ಕೂಡಾ ಇದ್ದರು. ಭಾವೇಶ್ ಮತ್ತು ನೀತಾ ಅವರಿಗೆ, ಭಾವಸಾ ಅವರ ಇಷ್ಟು ದೊಡ್ಡ ವಿಶ್ವಕುಟುಂಬಕ್ಕೆ ತಾವೂ ಸೇರ್ಪಡೆಯಾದ ಭಾವ.

ಚರ್ಚ್‌ನ ಆ ಸ್ಟಾಲ್‌ಗೆ ಭಾವೇಶ್ ಅವರು ಜೀವನ ಪೂರಾ ಋಣಿಯಾಗಿದ್ದರು. ಕಾರಣ ಈ ಸ್ಟಾಲ್‌ನಲ್ಲಿ ಅನಾಯಾಸವಾಗಿ ಇಂತಹ ಮಹಾನುಭಾವರ ಭೇಟಿ ಅವರಿಗೆ ಲಭ್ಯವಾಗಿತ್ತು. ಭಾವೇಶ್ ಅವರು ಮುನ್ನಡೆಯಲು ಈ ಎಲ್ಲ ವ್ಯಕ್ತಿಗಳ ಮಾರ್ಗದರ್ಶನ ಸಹಾಯಕವಾಗಿತ್ತು. ಈ ಮಹಾನುಭಾವರಲ್ಲಿ ಕೃಷ್ಣಕಾಂತ್ ಭಾಯಿ ಜೇಠಾ



ಪದಕಗಳ ಸಂಭ್ರಮದೊಂದಿಗೆ ಭಾವೇಶ್